Total No. of Questions – 12 Total No. of Pages – 04

Code No. – **M.K. 02**

# स्नातकपरीक्षाः – 2014

## बि.ए. II, विद्वन्मध्यमा – द्वितीयवर्षः

## भाषापत्रिका

## पत्रिका – 2

## विषयः – ಕನ್ನಡ

दिनाङ्कः – 20.03.2014 गरिष्ठाङ्काः -100

समयः – प्रातः 10.00 तः 1.00 पर्यन्तम् Max Marks 100

---

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ :** **10 x 01 = 10**

1. 'ಹೊಸಹೊಸ' ಈ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

   ಅ) ಜೋಡಿಪದ. ಆ) ದ್ವಿರುಕ್ತಿ. ಇ) ಅನುಕರಣಾವ್ಯಯ. ಈ) ಪ್ರತಿಧ್ವನಿಪದ.

2. ಇದು ಸರ್ವೋತ್ಕೃಷ್ಟವಾದ ಯಜ್ಞ.

   ಅ) ದ್ರವ್ಯಯಜ್ಞ ಆ) ಜ್ಞಾನಯಜ್ಞ, ಇ) ಧ್ಯಾನಯಜ್ಞ, ಈ) ನಿಷ್ಕಾಮಕರ್ಮಯಜ್ಞ

3. ಶಕುಂತಲೆ ತನ್ನ ಕೈಯಾರೆ ನೀರೆರೆದು ಬೆಳೆಸಿದ ಗಿಡ.

   ಅ) ಇರುವಂತಿಗೆ. ಆ) ಮಲ್ಲಿಗೆ. ಇ) ಸೇವಂತಿಗೆ. ಈ) ಜಾಜಿ.

4. ಗೃಹಿಣಿ ಆಶ್ರಮದಲ್ಲಿದ್ದು ಸೇವೆ ಮಾಡಿದ್ದು ಈ ಅಪೇಕ್ಷೆಯಿಂದ.

   ಅ) ಆರೋಗ್ಯ. ಆ) ಮೋಕ್ಷ. ಇ) ಪುತ್ರಸಂತಾನ. ಈ) ಐಶ್ವರ್ಯ.

5. ಮೂರ್ಛೆಯ ಕಲೆಯನ್ನು ತುಂಬಾ ದಕ್ಷತೆಯಿಂದ ಬಳಸಿಕೊಂಡಿರುವ ನಾಟಕಕಾರ.

   ಅ) ಕಾಳಿದಾಸ. ಆ) ಭವಭೂತಿ. ಇ) ಹರ್ಷ. ಈ) ಶೂದ್ರಕ.

6. ಗೌತಮ ಬುದ್ಧನ ತವರೂರು ಇದು.

   ಅ) ಲುಂಬಿಣಿ. ಆ) ಗಯಾ. ಇ) ಕಪಿಲವಸ್ತು. ಈ) ನೇಪಾಳ.

7. ಮೂರ್ತಿಗಳು ಮಲಗಿದ್ದಾಗ ಅವರ ಮೈಮೇಲೆ ಬಿದ್ದದ್ದು.

   ಅ) ಹಾವು. ಆ) ಜೇಡರಹುಳು. ಇ) ಚೇಳು. ಈ) ಮೊಂಡರಕಪ್ಪೆ.

8. ಹಂಪೆಯ ಈ ದೇಗುಲ ಲೋಕವಿಖ್ಯಾತವಾದುದು.

   ಅ) ವಿರೂಪಾಕ್ಷ. ಆ) ಹಜಾರಾಮ. ಇ) ಲಕ್ಷ್ಮೀನಾರಾಯಣ. ಈ) ವಿಠ್ಠಲರಾಯನ ಗುಡಿ.

9. ಹಂಪೆಯಲ್ಲಿರುವ ಹಲವು ಸ್ಥಳಗಳು ಈ ಕಾವ್ಯದೊಡನೆ ನೇರ ಸಂಬಂಧ ಹೊಂದಿದೆ.

   ಅ) ಮಹಾಭಾರತ. ಆ) ಭಾಗವತ. ಇ) ರಾಮಾಯಣ. ಈ) ಮೇಘದೂತ.

10. ಶ್ರೀರಾಮದೂತ ಹನುಮಂತ ಹುಟ್ಟಿದ ಸ್ಥಳವೆಂದು ಹೇಳುವ ಪರ್ವತ.

    ಅ) ಅಂಜನಾಪರ್ವತ. ಆ) ಹೇಮಕೂಟ. ಇ) ಮಾತಂಗಪರ್ವತ. ಈ) ಸಂಜೀವನಪರ್ವತ.

**II. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿಸಿ.** **05 x 01 = 05**

1. ಪತಿಗೃಹದಿಂದ ಮರಳಿದ ಶಕುಂತಲೆ ________________ ಆಶ್ರಮದಲ್ಲಿ ಆಶ್ರಯ ಪಡೆದಳು.
2. ಕಪಿಲವಸ್ತುವಿಗೆ ಭೇಟಿ ನೀಡಿದ ಬುದ್ಧನ ಸಂದರ್ಶನಕ್ಕೆ ಬಾರದಿದ್ದವಳೆಂದರೆ ____________ ಮಾತ್ರ.
3. ಸಂಸ್ಕೃತ ನಾಟಕಕಾರರಿಗೆ ______________ ಕಲೆಯಲ್ಲಿ ವಿಶೇಷ ಅಭಿರುಚಿ.
4. ಸಂಸ್ಕೃತ ಭಾಷೆಯೊಂದಿಗೆ ಸಂಬಂಧ ಹೊಂದಿರುವ ಅಫ್ಘಾನಿಸ್ತಾನದ ಭಾಷೆಗಳೆಂದರೆ _______ ಮತ್ತು ________ .
5. ಪಂಪಾಯಾತ್ರೆಯ ಯಾತ್ರಿಕರಿಗೆ ಮಾರ್ಗದರ್ಶಿಯಾಗಿದ್ದವನು ________________ .

**III. ಆವರಣದಲ್ಲಿ ಸೂಚಿಸಿದಂತೆ ಬರೆಯಿರಿ** **05 x 01 = 05**

1. ತುದಿಗಾಲು (ಈ ಶಬ್ದವನ್ನು ಬಿಡಿಸಿ ಬರೆದು, ಸಂಧಿಯ ಹೆಸರು ಬರೆಯಿರಿ.)
2. ಮತ್ತೆ ನನ್ನ <u>ಸೇವೆಗೆ</u> ಫಲವಿಲ್ಲವೇ ? (ಗೆರೆ ಎಳೆದ ಪದದ ವಿಭಕ್ತಿ, ಪ್ರತ್ಯಯ ಗುರುತಿಸಿ ಬರೆಯಿರಿ.)
3. ಲೌಕಿಕ (ಈ ಪದದ ವಿರುದ್ಧಪದ ಬರೆಯಿರಿ.)
4. ಶೃಂಗಾರ (ಈ ಪದದ ತದ್ಭವ ರೂಪವನ್ನು ಬರೆಯಿರಿ.)
5. ಅಯ್ಯೋ ಆ ಪುಣ್ಯ ನನಗೆಲ್ಲಿದೆ (ಈ ವಾಕ್ಯಕ್ಕೆ ಲೇಖನ ಚಿಹ್ನೆ ಹಾಕಿರಿ.)

**IV. ಹೊಂದಿಸಿ ಬರೆಯಿರಿ** **05 x 01 = 05**

| 'ಅ' | | 'ಆ' |
|---|---|---|
| 1. ಪುಕಪುಕ | – | ದುಂಬಿ. |
| 2. ಭೇಕ | – | ಅಶಕ್ತ. |
| 3. ಧೈರ್ಯವಿಲ್ಲದೇ | – | ಅನುಕರಣಾವ್ಯಯ. |
| 4. ಶಕ್ತ | – | ಲೋಪಸಂಧಿ. |
| 5. ಭ್ರಮರ | – | ಕಪ್ಪೆ. |
| | – | ವಕಾರಾಗಮಸಂಧಿ. |

**V. ಗದ್ಯಭಾಗ ಓದಿ ಕೆಳಲಾದ ಪ್ರಶ್ನೆಗಳಿಗೆ ಉತ್ತರಿಸಿ –** **05**

ಸ್ವತಂತ್ರಭಾರತದಲ್ಲಿ ಮಾತನಾಡುತ್ತ ಜವಹರಲಾಲರು ತಮ್ಮ ಯೌವನದ ಭಾರತವನ್ನು ಸ್ಮರಿಸಿಕೊಂಡು, 'ಭಾರತವನ್ನು ರೂಪಿಸಿದವರು ಇಬ್ಬರು. ರವೀಂದ್ರನಾಥ ಠಾಕೂರರು ಮತ್ತು ಗಾಂಧೀಜಿ' ಎಂದರು. ರವೀಂದ್ರರ 'ಗೀತಾಂಜಲಿ'ಯ ಇಂಗ್ಲೀಷ್ ಆವೃತ್ತಿ ಪ್ರಕಟವಾದಾಗ, ನೋಬೆಲ್ ಪ್ರಶಸ್ತಿ ಪಡೆದ ಇಂಗ್ಲೀಷ್ ಕವಿ ಯೇಟ್ಸ್ 'ಇಪ್ಪತ್ತು ವರ್ಷಗಳಿಂದ ಹೀಗೆ ನನ್ನ ಮನಸ್ಸನ್ನು ಮುಟ್ಟಿದ ಕಾವ್ಯವನ್ನು ಓದಿರಲಿಲ್ಲ.' ಎಂದ. ಮತ್ತೊಬ್ಬ ಕವಿ ಎಜ್ರಾ ಪೌಂಡ್ 'ರವೀಂದ್ರನಾಥ ಠಾಕೂರರ ಕವನಗಳ ಪ್ರಕಟನೆಯು ಇಂಗ್ಲೀಷ್ ಕಾವ್ಯದ ಚರಿತ್ರೆಯಲ್ಲಿ ಮತ್ತು ಜಗತ್ತಿನ ಕಾವ್ಯದ ಚರಿತ್ರೆಯಲ್ಲಿ ಒಂದು ಮಹತ್ತ್ವದ ಘಟನೆ.' ಎಂದ. ಅವರು ಎಷ್ಟು ಪ್ರಸಿದ್ಧರಾದವರೆಂದರೆ ದೂರದ ದೇಶ ಐಸ್‌ಲೆಂಡಿನ ಭಾಷೆಗೂ ಅವರ ಕವನಗಳು ಅನುವಾದವಾದವು. ಎಲ್ಲೆಡೆ ಕೇಳಿ ಬಂದ ಒಂದು ಮಾತೆಂದರೆ, ಇವರು 'ವಿಶ್ವಕವಿ'.

ಇದಕ್ಕೆ ಒಂದು ಕಾರಣ 'ಗೀತಾಂಜಲಿ'ಯ ವಿಶಿಷ್ಟ ಸ್ವರೂಪ. ಈ ಗದ್ಯ ಭಾವಗೀತೆಗಳ ಸಂಕಲನದುದ್ದಕ್ಕೂ ಒಂದು ಮನುಷ್ಯಚೇತನ ವಿಶ್ವದ ಮಹಾಚೇತನಕ್ಕೆ ತನ್ನ ಅನಿಸಿಕೆಗಳನ್ನು ಸಮರ್ಪಿಸುತ್ತದೆ. ಮನುಷ್ಯಚೇತನವು ಯಾವುದೊಂದು ದೇಶಕ್ಕೆ, ಧರ್ಮಕ್ಕೆ, ಪಂಥಕ್ಕೆ ಸೇರಿದುದಲ್ಲ. ಇಲ್ಲಿಯ ಮನವಿಗಳು, ಪ್ರಾರ್ಥನೆಗಳು ಒಂದು ಹೆಸರಿನ, ಹಿಂದೂ ಧರ್ಮದ ಒಂದು ಪಂಥದ ದೇವರಿಗೆ ಸಲ್ಲುವುದಿಲ್ಲ.

**ಪ್ರಶ್ನೆಗಳು :**

1. ನೆಹರೂ ಪ್ರಕಾರ ಭಾರತವನ್ನು ರೂಪಿಸಿದ ಇಬ್ಬರು ಯಾರು ?
2. 'ಗೀತಾಂಜಲಿ'ಯ ಬಗೆಗೆ ಯೇಟ್ಸ್ ಕವಿಯ ಅಭಿಪ್ರಾಯ ತಿಳಿಸಿ.
3. ಎಜ್ರಾ ಪೌಂಡ್ ರವೀಂದ್ರರ ಕವನಗಳ ಬಗ್ಗೆ ಏನು ಹೇಳಿದ್ದಾನೆ ?
4. 'ಗೀತಾಂಜಲಿ'ಯ ವಿಶಿಷ್ಟ ಸ್ವರೂಪ ರವೀಂದ್ರರಿಗೆ ಯಾವ ಬಿರುದನ್ನು ತಂದಿತು ?
5. 'ಗೀತಾಂಜಲಿ'ಯ ಭಾವಗೀತೆಗಳಲ್ಲಿ ಕವಿ ರವೀಂದ್ರರು ಏನನ್ನು ಚಿತ್ರಿಸಿದ್ದಾರೆ ?

**VI. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ –** **10 x 01 = 10**

1. ಮೂರ್ಛೆಯ ಕಲೆಯನ್ನು ವಿಶೇಷ ಕೌಶಲದಿಂದ ಬಳಸಿರುವ ನಾಟಕಕಾರ ಯಾರು ?
2. ಯಾವ ವೃತ್ತ, ಮೇಘದೂತದಿಂದಾಗಿಯೇ ಸಂಸ್ಕೃತ ಸಾಹಿತ್ಯ ಪ್ರಪಂಚದಲ್ಲಿ ನೆಲೆಗೊಂಡು ನಿಂತಿತು ?
3. ಆರ್ಫ಼ನ್ ವಿದ್ಯಾರ್ಥಿಗಳು ಸಂಪಾದಿಸಿ, ಪ್ರಕಟಿಸುತ್ತಿದ್ದ ಮಾಸಪತ್ರಿಕೆಯ ಹೆಸರೇನು ?
4. ಪಾಶ್ಚಾತ್ಯವಿದ್ವಾಂಸರು ಭಾರತದ ಧರ್ಮವನ್ನು ಕುರಿತು ಏನೆಂದು ಟೀಕೆ ಮಾಡಿರುತ್ತಾರೆ ?
5. ಪೂಜಾರಿ ನರಸಿಂಹಯ್ಯ, ಜೋಯಿಸನಿಗೆ ಯಾವ ಕಾಣಿಕೆಯನ್ನು ಸಲ್ಲಿಸಲಿಲ್ಲ ?
6. ಸಿದ್ಧಾರ್ಥನನ್ನು ಆಡಿಸಿ, ಸಾಕಿ ಸಲಹಿದವರು ಯಾರು ?
7. ಶಕುಂತಲೆಯ ಗೆಳತಿ ಅನಸೂಯೆಯ ಪ್ರಶ್ನೆಗೆ ದುಷ್ಯಂತ ಏನೆಂದು ಉತ್ತರಿಸಿದ್ದ ?
8. ಗಂಡು ಮಗು ಬೇಕೆಂಬ ಆಸೆಯ ಆತುರದಲ್ಲಿ ತಾಯಿ, ಗುರುಗಳಲ್ಲಿ ಏನೆಂದು ಹೇಳಿದಳು ?
9. ಭೇಕಗಳ ಬಗೆಗೆ ಲೇಖಕರು ಬಹುಕಾಲದವರೆಗೆ ಏನೆಂದುಕೊಂಡಿದ್ದರು ?
10. ಕೆಸರಿನಲ್ಲಿಯೂ, ಮಳೆಯಲ್ಲಿಯೂ ನಡೆದು, ಹಸಿದು ಬಂದವರಿಗೆ ಏನು ಸಿಕ್ಕಿತು ?

**VII. ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯಗಳಲ್ಲಿ ಉತ್ತರಿಸಿ –** **10 x 02 = 20**

1. 'ಯಜ್ಞ' ಪದದ ನಿಜವಾದ ಅರ್ಥ ಮತ್ತು ರೂಢಿಯಲ್ಲಿರುವ ಅರ್ಥಗಳನ್ನು ತಿಳಿಸಿ.
2. ಕನ್ನಡದ ಪ್ರಾಚೀನಕವಿಗಳು ಕಾಳಿದಾಸನಿಗೆ ಹೇಗೆ ಗೌರವ ಸಲ್ಲಿಸಿದ್ದಾರೆ ?
3. ಹೊಸದಾಗಿ ಶಬ್ದಗಳನ್ನು ರೂಪಿಸಿಕೊಳ್ಳಲು ಡಿ.ವಿ.ಜಿ. ಅವರು ಹೇಳಿರುವ ಎರಡು ದಾರಿಗಳಾವುವು ?
4. ಭಾರತೀಯ ನಾಟಕಗಳಲ್ಲಿ ಪಾತ್ರಗಳು ಹೇಗೆ ಮೂರ್ಛೆ ಹೊಂದುತ್ತವೆ ?
5. ಸಂಬುದ್ಧನು ಭಿಕ್ಷೆ ಬೇಡಲು ಬಂದಾಗ ಕಪಿಲವಸ್ತುವಿನ ಜನತೆಗೆ ಉಂಟಾದ ಗೊಂದಲವನ್ನು ತಿಳಿಸಿ.
6. ದುರ್ವಾಸರ ಬಗೆಗೆ ಶಕುಂತಲೆಯ ಅಭಿಪ್ರಾಯವನ್ನು ಸಂಗ್ರಹಿಸಿರಿ.
7. ವೀರಭದ್ರಾಚಾರಿ ಜೋಯಿಸನಾದ ಮೇಲೆ ಯಾವ ಯಾವ ಕೆಲಸಗಳಲ್ಲಿ ತೊಡಗಿದನು ?

8. ಸತ್ತು ಹೋದ ಮಗಳು ಮತ್ತೆ ತನಗೆ ಬೇಕು ಎಂದು ಬೇಡಿದ ತಾಯಿಗೆ ಗುರುಗಳು ಏನೆಂದು ಬುದ್ಧಿ ಹೇಳಿದರು ?

9. ಸಿಡಿಲು ಬಡಿದು ತಾಳೆಮರಗಳು ಹೊತ್ತಿ ಉರಿದ ಸಂದರ್ಭವನ್ನು ವಿವರಿಸಿ.

10. ವಿದ್ಯಾರಣ್ಯರ ಪೂಜೆ ಹೇಗೆ ನಡೆಯಿತು ?

**VIII. ಕೆಳಗಿನ ಮೂರು ವಾಕ್ಯಗಳಿಗೆ ಸಂದರ್ಭಸಹಿತ ವಿವರಿಸಿ** **03 x 03 = 09**

1. ಹೋಗಲಿ! ಅವನ ದಂಡೆ ಹರಿಯಿತು. ಬರುವ ರೂಪಾಯಿ ಕಳೆದುಕೊಂಡರೆ ಯಾರಿಗೆ ನಷ್ಟ ?
2. ಅವನಿಗೇನು ? ಎಲ್ಲಿದ್ದರೆ ಅದೇ ಮನೆ. ಅವನ ಆಯುಧ ಆ ದೊಣ್ಣೆ !
3. ಮರೆವಿನ ನಟನೆಗೆ ಉಂಗುರ ಎಂದಾದರೂ ಔಷಧಿಯಾಗುವುದೆಂದು ಇದೆಯೇ ?
4. ಅಲ್ಪಬುದ್ಧಿಯವರಿಗೆ ಅಲ್ಪವಾದ ಫಲ ದೊರೆಯುತ್ತದೆ.

**IX. ಇಬ್ಬರು ಲೇಖಕರ ಕಾಲ, ಸ್ಥಳ ಹಾಗೂ ಕೃತಿಗಳನ್ನು ತಿಳಿಸಿರಿ** **02 x 03 = 06**

1. ದ.ರಾ. ಬೇಂದ್ರೆ
2. ಎ.ಆರ್. ಕೃಷ್ಣಶಾಸ್ತ್ರಿ
3. ವೈದೇಹಿ.

**X. ಯಾವುದಾದರೂ ಮೂರು ಪ್ರಶ್ನೆಗಳಿಗೆ ಆರು, ಎಂಟು ವಾಕ್ಯಗಳಲ್ಲಿ ಉತ್ತರಿಸಿ** **03 x 04 = 12**

1. ಹಂಪೆಯಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಯಾವ ಯಾವ ಸ್ಥಳಗಳಿವೆ ವಿವರಿಸಿ.
2. ಭೂಮಿಯ(ಮೇಘ)ಕಾಮ, ಕವಿಯ ಮೇಘ, ಯಕ್ಷನ ಮೇಘ ಇವುಗಳನ್ನು ಕುರಿತ ಬೇಂದ್ರೆಯವರ ಸ್ವತಂತ್ರ ವಿಚಾರಗಳನ್ನು ವಿವರಿಸಿ.
3. ಶುದ್ಧೋಧನ ಪುತ್ರವ್ಯಾಮೋಹದಲ್ಲಿ ಮೈಮರೆತು ಆಡಿದ ಮಾತುಗಳಾವುವು ?
4. ವೀರಭದ್ರಾಚಾರಿ ಜೋಯಿಸನಾದ ಮೇಲೆ ಅವನ ಮನೆಗೆ ಒದಗಿದ ದುಸ್ಥಿತಿಯನ್ನು ವಿವರಿಸಿ.

**XI. ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ –** **01 x 03 = 03**

1. ಆಕಳು ಕಪ್ಪಾದರೆ ಹಾಲು ಕಪ್ಪೆ ?
2. ಮನಸಿದ್ದಲ್ಲಿ ಮಾರ್ಗ.

**XII. ಪತ್ರ/ಪ್ರಬಂಧ ಬರೆಯಿರಿ** **01 x 10 = 10**

ನಿಮ್ಮ ಕಾಲೇಜಿನಲ್ಲಿ ಆಚರಿಸಿದ ವಿವೇಕಾನಂದ ಜಯಂತಿ ಸಮಾರಂಭವನ್ನು ವಿವರಿಸಿ ನಿಮ್ಮ ತಮ್ಮನಿಗೆ ಪತ್ರ ಬರೆಯಿರಿ.

**ಅಥವಾ**

'ಪರಿಸರದ ನಾಶದಿಂದ ಉಂಟಾಗಿರುವ ಪರಿಣಾಮಗಳು' ಈ ವಿಷಯವನ್ನು ಕುರಿತು 12–15 ವಾಕ್ಯಗಳಲ್ಲಿ ಪ್ರಬಂಧ ರಚಿಸಿರಿ.

~~~~~ ***** ~~~~~
~~~~~